ಓ.ಎಸ್. ನಂ.83/2020
ಪಿಡಬ್ಲು-1

ದಿನಾಂಕ 07.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>

ನಾನು ಈ ದಾವೆಯನ್ನು ಪಿಂಚಣಿ ಮತ್ತು ನೌಕರಿ ಕೋರಿ ವಿಜಯಲಕ್ಷ್ಮಿರವರ ಮೇಲೆ ಸಲ್ಲಿಸಿರುತ್ತೇನೆ. ನನ್ನ ಮಾವ ಸಾಯಬಣ್ಣರವರಿಗೆ 03-ಜನ ಮಕ್ಕಳು ಎಂದರೆ ಸರಿ. ನನ್ನ ಭಾವ ಶಂಕ್ರಪ್ಪರವರಿಗೆ 02-ಜನ ಗಂಡು ಮಕ್ಕಳು ಎಂದರೆ ಸರಿ. ಶಿವಪ್ಪರವರಿಗೆ 06-ಜನ ಮಕ್ಕಳು ಎಂದರೆ ಸರಿ. ಬಸವರಾಜರವರಿಗೆ 06-ಜನ ಮಕ್ಕಳು ಎಂದರೆ ಸಾಕ್ಷಿ ನನಗೆ ಒಬ್ಬ ಮಗಳಿದ್ದು ವಿಜಯಲಕ್ಷ್ಮಿರವರಿಗೆ 05-ಜನ ಮಕ್ಕಳಿರುತ್ತಾರೆ. ನನ್ನ ಗಂಡನ ಸೇವಾ ಪುಸ್ತಕದ ದಾಖಲಾತಿಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ಸೇವಾ ಪುಸ್ತಕದಲ್ಲಿ ನನ್ನ ಗಂಡನು ನನ್ನ ಎಲ್ಲಾ ಸೇವಾ ಸೌಲಭ್ಯಗಳನ್ನು 1ನೆ ಪ್ರತಿವಾದಿಗೆ ಹೋಗಬೇಕೆಂದು ಬರೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ಎಲ್ಲಾ ಸೌಲಭ್ಯಗಳು ನನಗೆ ಮತ್ತು ಪ್ರತಿವಾದಿಯರಿಗೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಬಸವರಾಜ ಮತ್ತು 1ನೆ ಪ್ರತಿವಾದಿ ಮದುವೆಯಾಗಿ 33-ವರ್ಷಗಳಾಗಿರುತ್ತದೆ ಎಂದರೆ ಸಾಕ್ಷಿ ಮದುವೆಯಾಗಿಲ್ಲ ಎಂದು ಹೇಳುತ್ತಾರೆ. ನನ್ನ ಹಾಗೂ ನನ್ನ ಭಾವಂದಿರ ಜೊತೆ ಸಂಬಂಧ ಚೆನ್ನಾಗಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ